ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

*ಹೆಂಡತಿಯ ಚಪ್ಪಲಿಯನ್ನು ಗಂಡ ಹೋಲಿಸಿಕೊಂಡು ಬರಬೇಕೆ?*



ಅಸಲಿಗೆ ಅದು ಹರಿಯುವವರೆಗೆ ಹೊಡೆಸಿಕೊಳ್ಳುವಂತಹ ಕೆಲಸವನ್ನು ಇವನು ಮಾಡಬಾರದಿತ್ತು!

ಹಾಡ್ಯ ಜಯಾನಂದ, ಮೈಸೂರು

*ಹುಡುಗಿಯ ಪೋಸ್, ಹುಡುಗನ ಪ್ರಪೋಸ್, ನಂತರ...?*

ಹುಡುಗಿಯ ಅಪ್ಪನಿಂದ ಅಪೋಸ್, ಹುಡುಗ ಸ್ಥಳದಿಂದ ಡಿಸ್ಪೋಸ್!

ಪಿ.ಎನ್.ಶ್ರೀವತ್ಸ, ಬೆಂಗಳೂರು

*ಕಠಾರಿವೀರ ಸುರಸುಂದರಾಂಗಿ ಚಿತ್ರವನ್ನು ಮಠಾಧೀಶರೆಲ್ಲರೂ ಒಟ್ಟಿಗೆ ಕುಳಿತು ನೋಡಿದಂತೆ ಪ್ರತಿಯೊಂದು ಚಿತ್ರವನ್ನೂ ನೋಡುವಂತಾದರೆ?*

ಸೆನ್ಸಾರ್ ಬೋರ್ಡ್ ಕೆಲಸವನ್ನು ಇವರಿಗೇ ಒಪ್ಪಿಸಿಬಿಡಬಹುದು!

ಜಾ.ರು.ಆದಿನಾರಾಯಣಮುನಿ, ಬೆಂಗಳೂರು

*ಮನುಷ್ಯನ ನಿಜವಾದ ಆಭರಣ ಯಾವುದು?*

ಅರಿತು ನಡೆವ ಒಡನಾಡಿ.

ಕುಮಾರ ಚಲವಾದಿ, ಹೊಳೆನರಸಿಪುರ

*ಹೆಣ್ಣಿನ ನಾಲಿಗೆಯನ್ನು ಕತ್ತಿಯ ಅಲಗಿಗೆ ಏಕೆ ಹೋಲಿಸುತ್ತಾರೆ?*



ಎರಡರಿಂದಲೂ ರಕ್ತ ಸಂಭವ. ಕತ್ತಿಯ ಪೆಟ್ಟಿಗೆ ಸುರಿದಾಗ ಗಾಯ, ನಾಲಿಗೆಯ ಪೆಟ್ಟಿಗೆ ಸುರಿದಾಗ ಅನುರಕ್ತ/ವಿರಕ್ತ!

ಎಸ್.ಶ್ರೀಧರ್, ಬೆಂಗಳೂರು

*ಹಣವಿಲ್ಲದಾಗ ಮನುಷ್ಯನ ಗುಣ ಹೇಗಿರುತ್ತದೆ?*

ಜಾರುವ, ಜಾರಿಸುವ ಸುಲಿದ ಬಾಳೆಯ ಹಣ್ಣಿನ ಸಿಪ್ಪೆಯ ಅಂದದ!

ಆರಿಫ್, ದಾವಣಗೆರೆ

*ಪ್ರೀತಿಗೆ ಹುಡುಗಿಯರಿಗಿಂತ ಆಂಟಿಯರೇ ಬೇಗ ಗ್ರೀನ್ ಸಿಗ್ನಲ್ ಕೊಡ್ತಾರಲ್ಲಾ, ಏಕೆ?*

ಅವರ ಲವ್ ಮಾಡುವ ದಿನಗಳ ಎಕ್ಸ್‌ಪೈರಿ ಡೇಟ್ ಹತ್ತಿರ ಇರುವುದರಿಂದ!

ಪಿ.ಜೆ. ರಾಘವೇಂದ್ರ, ಮೈಸೂರು

*ಅಲ್ಲಿದೆ ನಮ್ಮ ಮನೆ, ಇಲ್ಲಿರುವುದು ಸುಮ್ಮನೆ ಎಂದು ವಿಧಾನಸೌಧದಲ್ಲಿ ಬರೆಸಿದರೆ ಹೇಗೆ?*

ಬೇಡ; ಎಲ್ಲಿರುವುದು ನಿಮ್ಮನೆ, ಅಡ್ರೆಸ್ ಕೊಡಿ ಎಂದು ಲೋಕಾಯುಕ್ತ ವಕ್ತಿಸ್ತಾರೆ ಎಂದನೊಬ್ಬ ಪುಢಾರಿ.

ಕೆ.ವಿ.ಶಿವಕುಮಾರ್ ಕಾಳೀಹುಂಡಿ, ಮೈಸೂರು

*ಇತ್ತೀಚಿನ ಪ್ರೇಮಿಗಳು ಹಣಕ್ಕೆ ಹೆಚ್ಚು ಮಹತ್ವ ಕೊಡುತ್ತಾರೇಕೆ?*

ಮನೆಯಿಂದ ಹೊರಗಟ್ಟಿದರೆ ಬಾಡಿಗೆ ಮನೆಗೆ ಅಡ್ವಾನ್ಸ್ ಕೊಡಲು ಹಣ ಬೇಕಲ್ಲ!

ಎಚ್. ಸಿದ್ಧಾರ್ಥ ಹೆಬ್ಬಾರ, ಈದು

*ನಮ್ಮ ಬದುಕಿನಲ್ಲಿ ಪ್ರಾರಬ್ಧದ ಕೈವಾಡ ವೇನಾದರೂ ಇದೆಯೆ?*

ಒಂದಲ್ಲ, 773 ಪ್ರಾರಬ್ಧಗಳ ಕೈವಾಡವಿದೆ! ವಿಧಾನಸೌಧದ್ದು 228, ಪಾರ್ಲಿಮೆಂಟ್‌ನದು 545!

ಶಿವಮೊಗ್ಗ ರಮೇಶ್, ಮೈಸೂರು

*ಮಂಡ್ಯದ ವಕೀಲನೊಬ್ಬ ಸಹಾಯ ಮಾಡುವ ನೆಪದಲ್ಲಿ ಬುದ್ಧಿಮಾಂದ್ಯ ಮಹಿಳೆಯ ಶೀಲಭಂಗ ಮಾಡಿದಾಗ ಯಾವ ವಕೀಲರ ಸಂಘವೂ ಪ್ರತಿಭಟಿಸಲಿಲ್ಲವಲ್ಲಾ, ಏಕೆ?*

ನ್ಯಾಯದಿಂದ, ನ್ಯಾಯಕ್ಕಾಗಿ, ನ್ಯಾಯಕ್ಕೋಸ್ಕರ ಎಂದು ಇದ್ದ ಆ ಸಂಘ ಈಗ ವಕೀಲರಿಂದ, ವಕೀಲರಿಗಾಗಿ, ವಕೀಲರಿಗೋಸ್ಕರ ಎಂದು ಬದಲಾಗಿದೆಯಂತೆ!

ಡಿ.ಎಲ್. ನಾಗರಾಜ್, ಚನ್ನಗಿರಿ

ಹೆಂಡತಿ ತನ್ನ ತಪ್ಪು ತಿಳಿದು, ಅರಿತು, ತಿದ್ದಿಕೊಳ್ಳಲು ಏನು ಮಾಡಬೇಕು?

ಸ್ವಲ್ಪ ಯೋಚಿಸಿ ಸಾರ್! ನಿಮ್ಮನ್ನು ಕಟ್ಟಿಕೊಂಡದ್ದೇ ತಪ್ಪು ಎಂದರಿತು ತಿದ್ದಿಕೊಳ್ಳುತ್ತೇನೆ ಎಂದುಬಿಟ್ಟರೆ ನಿಮ್ಮ ಗತಿ?!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*2012ರ ಡಿಸೆಂಬರ್‌ನಲ್ಲಿ ಪ್ರಳಯವಾದರೆ ಪ್ರೇಮಿಗಳ ಗತಿ ಏನು ಸಾರ್?*

ಚಿಂತೆ ಬೇಡ; ಪ್ರಳಯದ ಬ್ರೇಕ್‌ನ ನಂತರ ಪ್ರಣಯದ ಕಥೆ ಮುಂದುವರಿಯುತ್ತದೆ.

## ಬಹುಮಾನಿತ ಪ್ರಶ್ನೆ

ಆರ್. ಮಧುಸೂದನ್, ಹಾಸನ

*ಹಾಸಿಗೆ ಇದ್ದಷ್ಟು ಕಾಲು ಚಾಚಿದರೆ ನಿದ್ದೆ ಬರೋದಿಲ್ವಲ್ಲಾ...?*

ತಿಳಿಯಿತು ಬಿಡಿ; ಸರ್ಕಾರಿ ಅಧಿಕಾರಿಯಾದ ನಿಮಗೆ ಟೇಬಲ್ ಇದ್ದಷ್ಟು ಕೈ ಚಾಚು, ಕುರ್ಚಿಯಿದ್ದಷ್ಟು ಮೈ ಚಾಚು ಎಂಬುದೇ ಸರಿಯಾದ ಗಾದೆ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಹಗರಣ, ಅಕ್ರಮ ಮಾಡಿಕೊಳ್ಳದೆ ರಾಜ್ಯಭಾರ ನಡೆಸಲು ಸಾಧ್ಯವೇ ಇಲ್ಲವೇ?*

ಅಲ್ಲೇ ನೀವು ಎಡವುತ್ತಿರುವುದು;ಇವರು ಕುಳಿತಿರುವುದು ರಾಜ್ಯ ಭಾರ ಮಾಡಲಲ್ಲ, ಚೆನ್ನಾಗಿ ದೋಚಿ ರಾಜ್ಯ ಹಗುರ ಮಾಡಲು!

ಬಿ. ಚಂದ್ರೇಗೌಡ, ಬೆಂಗಳೂರು

*ರಾಜಕಾರಣಿಗಳಿಗೆ ಪಾಪಪ್ರಜ್ಞೆ ಕಾಡುವುದಿಲ್ಲವೆ?*

ರಾಜಕಾರಣಿಗಳಿಗೆ, ಪಾಪ! ಪ್ರಜ್ಞೆಯೇ ಕಾಡುವುದಿಲ್ಲ!

ಎ.ಕೆ. ಪಟ್ಟಾಭಿ, ಬೆಂಗಳೂರು

*ಆನೆಯನ್ನು ಪಳಗಿಸಲು ಅಂಕುಶವಿದೆ; ಕಟ್ಟಿಕೊಂಡವಳನ್ನು ಪಳಗಿಸಲು ಏನಿದೆ?*



ಎಲ್ಲಾದರೂ ರಿಂಗ್‌ಮಾಸ್ಟರನ್ನು ಪ್ರಾಣಿ ಪಳಗಿಸುವುದುಂಟೆ? ಆಕೆ ರಿಂಗ್ ಮಾಸ್ಟರ್, ನೀವು.......!

ಎಸ್.ಜಿ. ರಾಜಶೇಖರ ರೆಡ್ಡಿ, ಗೌರಿಬಿದನೂರು

*ರಾಷ್ಟ್ರಪತಿ ಹುದ್ದೆಗೆ ನಿಮ್ಮ ಹೆಸರನ್ನು ಏಕೆ ಸೂಚಿಸುತ್ತಿಲ್ಲ?*

ತಿಂಗಳುಗಟ್ಟಲೆ ಕುಟುಂಬದೊಡನೆ ವಿದೇಶ ಪ್ರಯಾಣ ಮಾಡುವಷ್ಟು ಪ್ರತಿಭಾವಂತ ಅಲ್ಲವಾದ್ದರಿಂದ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಇಂದಿನ ವಾತಾವರಣದಲ್ಲಿ ಜನರಿಗೆ ಸೆನ್ಸ್ ಆಫ್ ಹ್ಯೂಮರ್ ಇಲ್ಲದೇ ಇರುವುದರ ರಹಸ್ಯ?*

ಅಳುವು ಸಹಜದ ಧರ್ಮ, ಅಳಿಸುವುದು ದಿನ ಕರ್ಮ, ಅಳುವ ನೋಡುತ ಅಳುವುದತಿಶಯದ ಧರ್ಮ, ಅಳುವ ಅಳಿಸುವ ಸೀರಿಯಲ್ ನೋಡುವಗೆ ನಗೆ ಎಂತು ಸಂದೀತು ಮಂಕುದಿಣ್ಣೆ!

■ ರಾಮ್